# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟಸನ್ಸ್ ರಸ್ತೆ, ಫ್ರೇಜರ್ ಟೌನ್**

ಸ.ಕಾ.ನಿ.ಅ/ಪುನ/ಪಿಆರ್/ 276 /2021-22 ದಿನಾಂಕ: 14-09-2021

**ದಿನಾಂಕ:- 14-09-2021 ರಂದು ವಾರ್ಡ್ ನಂ.78 ರ ವಾರ್ಡ್ ಸಮಿತಿ ಹಾಗೂ ವಾರ್ಡ್ ವಿಪತ್ತು ನಿರ್ವಹಣಾ ಸಮಿತಿಯ ಸಭೆಯ ನಡುವಳಿಗಳು:-**

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಜಿ.ತಿಪ್ಪೇಸ್ವಾಮಿ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ವಾರ್ಡ್ ವ್ಯಾಪ್ತಿಯ ರಾಬರ್ಟ್‌ಸನ್ ರಸ್ತೆ ಮತ್ತು ಸ್ಟಿಫನ್ಸ್ ರಸ್ತೆಗಳಲ್ಲಿರುವ ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚಲು ತಿಳಿಸಲಾಯಿತು.
2. ಸ್ಟಿಫನ್ಸ್ ರಸ್ತೆಯ ಬದಿಯಲ್ಲಿ ಬಿದ್ದಿರುವ ಡೆಬ್ರೀಸ್ / ಘನತ್ಯಾಜ್ಯವನ್ನು ತೆರವುಗೊಳಿಸಲು ಸಾರ್ವಜನಿಕರು ಮನವಿ ಮಾಡಿರುತ್ತಾರೆ.
3. ವಾರ್ಡ್ ವ್ಯಾಪ್ತಿಯಲ್ಲಿ ಅವಶ್ಯಕತೆ ಇರುವ ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ವಾರ್ಡಿನ RWA ರವರು ಸಭೆಯಲ್ಲಿ ತಿಳಿಸಿರುತ್ತಾರೆ.
4. ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿರುವುದನ್ನು ತೆರವುಗೊಳಿಸಲು ತಿಳಿಸಲಾಯಿತು.
5. ಸ್ಟೀಫನ್ಸ್ ರಸ್ತೆ ಸ್ಯಾನಟರಿ ಪಿಟ್‌ನಿಂದ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಸದರಿ ಸ್ಯಾನಿಟರಿ ಲೈನ್ಸ್ ಅನ್ನು ದುರಸ್ಥಿಗೊಳಿಸಲು BWSSB ರವರಿಗೆ ತಿಳಿಸಲಾಯಿತು.
6. ವೀಲರ್ ರಸ್ತೆಯಲ್ಲಿ ಸ್ಟ್ರೀಟ್‌ಲೈಟ್‌ಗಳನ್ನು ಸರಿಪಡಿಸಲು ತಿಳಿಸಲಾಗಿರುತ್ತದೆ.
7. 2017-18 ನೇ ಸಾಲಿನ ಪಿ-2340 ರ ಅಡಿಯಲ್ಲಿ ಶ್ರೀಮತಿ.ಮಲ್ಲಿಕಾ ಬೇಗಂ ರವರಿಗೆ ಒಂಟಿ ಮನೆ ನಿರ್ಮಿಸಿಕೊಳ್ಳಲು ರೂ.4.00 ಲಕ್ಷಗಳ ಅನುಮೋದನೆಯಾಗಿದ್ದು, ಜಾಜ್ ಸಂಖ್ಯೆ ನೀಡಲಾಗಿರುತ್ತದೆ. ಆದರೆ ಸದರಿಯವರು ಅಕಾಲಿಕ ಮರಣ ಹೊಂದಿರುವುದರಿಂದ ಅವರ ಮಗಳಾದ ಶ್ರೀಮತಿ. ಸದತ್ ಉನ್ನಿಸಾ ರವರಿಗೆ ಬದಲಿ ಜಾಬ್ ಸಂಖ್ಯೆಯನ್ನು ನೀಡಲು ಸಭೆಯಲ್ಲಿ ಚರ್ಚಿಸಿ ಅನುಮೋದನೆ ನೀಡಲಾಗಿರುತ್ತದೆ.
8. ವಾರ್ಡಿನ ಕೆಲವು ಪ್ರದೇಶಗಳನ್ನು ಪರಿಶೀಲಿಸಿ ಸದರಿ ಪ್ರದೇಶಗಳಲ್ಲಿ ಕಂಡುಬಂತಹ ತೊಂದರೆಗಳನ್ನು ಕೂಡಲೇ ಬಗೆಹರಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾರ್ಗ ಸೂಚನೆಯನ್ನು ನೀಡಲಾಗಿರುತ್ತದೆ.
9. ಮಾಸ್ಕ್ ರಸ್ತೆಯಲ್ಲಿರುವ SWD ಯ ಸ್ಲಾಬ್ ದುರಸ್ಥಿಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.
10. ವಿವಿಧ ಇಲಾಖೆಯ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಮಿಟಿಂಗ್‌ಗೆ ಹಾಜರಾಗಲು ತಿಳಿಸಲಾಯಿತು.

ನಂತರ ಮುಂದಿನ ಸಭೆಯೊಳಗೆ ಮೇಲ್ಕಂಡ ಕೋವಿಡ್-19 ರ ಬಗ್ಗೆ ವಾರ್ಡ್ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲು ಸೂಚಿಸುತ್ತಾ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು

ಕಾರ್ಯದರ್ಶಿ

**ಪ್ರತಿಯನ್ನು:**

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಾರ್ಡ್ ಸಮಿತಿಯ ಸದಸ್ಯರು, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.

Scanned with CamScanner